ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ.

ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 953530417, 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 186, ಬುಧವಾರ, 06–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

ಸಚಿವರ ಪ್ರವಾಸ ಕಾರ್ಯಕ್ರಮ

ಹಾಸನ ಸೆ, 5–ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರಾದ ಎ.ಮಂಜು ಅವರುಸೆಪ್ಟಂಬರ್ 6ರಂದು ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆಯುವ 'ಬ್ರಹ್ಮಶ್ರೀ ನಾರಾಯಣಗುರು ಜಯಂತಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಜೆ ಹನ್ಯಾಳುನಲ್ಲಿ ವಾಸ್ತವ್ಯ ಮಾಡುವರು.ಸೆ, 7ರಂದು ಬೆಳಿಗ್ಗೆ 10 ಗಂಟೆಗೆ ಅರಕಲಗೂಡಿನಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮೈಸೂರಿಗೆ ತೆರಳುವರು.

ಗೌರಿ ಲಂಕೇಶ್ ಕಗ್ಗೊಲೆ

ಬೆಂಗಳೂರು:ಸೆ,5– ಹಿರಿಯ ಪತ್ರಕರ್ತೆ ಹಾಗೂ ಸಾಹಿತಿ ಗೌರಿ ಲಂಕೇಶ್ ಅವರನ್ನು ಅವರ ರಾಜರಾಜೇಶ್ವರಿ ನಗರದ ನಿವಾಸದಲ್ಲಿ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಮಂಗಳವಾರ ನಡೆದಿದೆ.

ಮೂವರು ದುಷ್ಕರ್ಮಿಗಳು ಇಂದು ಸಂಜೆ ಮನೆಯ ಹೊರಗಡೆ ನಿಂತಿದ್ದ ಗೌರಿ ಲಂಕೇಶ್ ಅವರ ಮೇಲೆ ಏಳು ಸುತ್ತು ಗುಂಡು ಹಾರಿಸಿದ್ದು, ಮೂರುಗುಂಡುಗಳು ಎದೆಹೊಕ್ಕಿರುವ ಪರಿಣಾಮ ಪತ್ರಕರ್ತೆ ಸ್ಥಳದಲ್ಲೇ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ.

ಸ್ಥಳಕ್ಕೆ ರಾಜರಾಜೇಶ್ವರಿ ನಗರ ಪೊಲೀಸರು ದೌಡಾಯಿಸಿದ್ದು, ಗೌರಿ ಲಂಕೇಶ್ ಅವರು ಮನೆಯ ಹೊರಗೆ ನಿಂತ ವೇಳೆ ಎದೆ ಹಾಗೂ ಹೃದಯ ಭಾಗಕ್ಕೆ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ ಎಂದು ಡಿಸಿಪಿ ಅನುಚೇತ್ ಅವರು ಮಾಧ್ಯಮಕ್ಕೆ ತಿಳಿಸಿದ್ದಾರೆ.

ಪತ್ರಕರ್ತೆ ಮತ್ತು ಸಾಹಿತಿ
ಗೌರಿ ಲಂಕೇಶ್
ಹತ್ಯೆ

ಮಂಗಳೂರು ಚಲೋ: ಬಿಜೆಪಿ ಕಾರ್ಯಕರ್ತರು ಪೊಲೀಸ್ ವಶಕ್ಕೆ

ಬೆಂಗಳೂರು: ಹಿಂದೂ ಸಂಘಟನೆಯ ಕಾರ್ಯಕರ್ತರ ಕೊಲೆಯನ್ನು ಖಂಡಿಸಿ, ಪಿಎಫ್‌ಐ, ಎಸ್ ಡಿಪಿಐ ಸಂಘಟನೆಗಳನ್ನು ನಿಷೇಧಿಸುವಂತೆ ಆಗ್ರಹಿಸಿ ಬಿಜೆಪಿ ಹಮ್ಮಿಕೊಂಡಿರುವ ಮಂಗಳೂರು ಚಲೋ ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಲು ಫ್ರೀಡಂ ಪಾರ್ಕ್‌ಗೆ ಆಗಮಿಸಿದ್ದ ಸಾವಿರಾರು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಿಜೆಪಿ ಹಿರಿಯ ನಾಯಕರ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು ಫ್ರೀಡಂ ಪಾರ್ಕ್ ನಲ್ಲಿ ನೆರೆದಿದ್ದು, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ, ಸಂಸದ ಪ್ರತಾಪ್ ಸಿಂಹ, ಸಂಸದೆ ಶೋಭಾ ಕರಂದ್ಲಾಜೆ ಅರವಿಂದ ಲಿಂಬಾವಳಿ ಸೇರಿದಂತೆ ಹಲವು ನಾಯಕರನ್ನೂ ಸಹ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಚಾಲನೆ ನೀಡಲು ಆಗಮಿಸಬೇಕಿದ್ದ ಯಡಿಯೂರಪ್ಪ ನೇರವಾಗಿ ಮಂಗಳೂರಿಗೆ ಆಗಮಿಸುವುದಾಗಿ ತಿಳಿಸಿದ್ದಾರೆ.

ಪೊಲೀಸರ ನಡೆಯನ್ನು ಖಂಡಿಸಿರುವ ಬಿಜೆಪಿ ಕಾರ್ಯಕರ್ತರು, ನಾಯಕರು ರಸ್ತೆ ಮಧ್ಯದಲ್ಲಿಯೇ ಕುಳಿತು ಪ್ರತಿಭಟನೆಯನ್ನು ತೀವ್ರಗೊಳಿಸಿದ್ದು, ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ತೀವ್ರಗೊಳಿಸಿದ್ದಾರೆ.

ರ್‍ಯಾಲಿಗೆ ಚಾಲನೆ ದೊರೆತ ಬಳಿಕ ನೆಲಮಂಗಲ ತಲುಪಿದ ನಂತರ ಮತ್ತೊಂದು ಸಮಾವೇಶ ನಡೆಯಲಿದ್ದು, ಸಂಜೆ ವೇಳೆಗೆ ಕುಣಿಗಲ್, ಯಡಿಯೂರು ಮಾರ್ಗವಾಗಿ ಬೈಕ್ ರ್‍ಯಾಲಿ ಹಾಸನ ತಲುಪಲಿದೆ. ನಂತರ ಹಾಸನದಲ್ಲಿ ಉಳಿದುಕೊಳ್ಳಲಿರುವ ಕಾರ್ಯಕರ್ತರು ಸೆ.06 ರಂದು ಸಕಲೇಶಪುರಕ್ಕೆ ತೆರಳಲಿದ್ದು ಅಲ್ಲಿಯೂ ಸಮಾವೇಶ ನಡೆಯಲಿದೆ.

ಇನ್ನು ರ್‍ಯಾಲಿಯನ್ನು ತಡೆಯಲು ಪೊಲೀಸರು ಸಹ ಸಿದ್ಧತೆ ನಡೆಸಿದ್ದು, ಕೋಲಾರ, ಮುಳಬಾಗಿಲು ಸೇರಿದಂತೆ ಈಗಾಗಲೇ ಹಲವು ಪ್ರದೇಶಗಳಲ್ಲಿ ರ್‍ಯಾಲಿಗೆ ಸಜ್ಜುಗೊಂಡಿದ್ದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಟೌನ್ ಹಾಲ್ ಬಳಿ 60 ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಗಿದೆ.

ಉತ್ತಮ ಸಮಾಜ ನಿರ್ಮಾಣಕ್ಕೆ ವಕೀಲರ ಪಾತ್ರ ಪ್ರಮುಖ

GOVERNMENT OF KARNATAKA
DEPARTMENT OF COLLEGIATE EDUCATION
GOVERNMENT ... COLLEGE
HASSAN
INTERNAL QUALITY ASSURANCE CELL
"SPECIAL LECTURE SERIES"

ಹಾಸನ:ಸೆ,5–ವಕೀಲರು ಇಲ್ಲವಾದರೇ ಉತ್ತಮ ಸಮಾಜವೇ ಉಳಿಯುವುದಿಲ್ಲ ಎಂದು 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅಭಿಪ್ರಾಯ ಪಟ್ಟರು.

ನಗರದ ಎಂ.ಜಿ. ರಸ್ತೆ ಬಳಿ ಇರುವ ಜಿಲ್ಲಾ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ ಹಾಗೂ ಸರಕಾರಿ ಕಾನೂನು ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾನೂನು ವಿದ್ಯಾರ್ಥಿಗಳಿಗೆ ಕಾನೂನು ಅರಿವು–ನೆರವು ಹಾಗೂ ಹೊಸ ವಿದ್ಯಾರ್ಥಿಗಳ ಅಭಿವಿನ್ಯಾಸ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ನಮಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ಮೊದಲು ಸಮಾಜಕ್ಕೆ ನಾವು ಯಾವ ಕೊಡುಗೆ ನೀಡಿದ್ದೇವೆ ಎನ್ನುವುದು ಮುಖ್ಯವಾಗಿದೆ. ಹೇಳಿದರು.

ಕಕ್ಷಿದಾರರಿಗೆ ನ್ಯಾಯ ಒದಗಿಸಲು ವಕೀಲರ ಅವಶ್ಯಕತೆ ಹೆಚ್ಚಿದ್ದು, ವಕೀಲರೇ ಇಲ್ಲವಾದರೇ ಸಮಾಜವನ್ನು ಯಾವ ರೀತಿ ನೋಡಬಹುದು ಎಂದು ಪ್ರಶ್ನೆ ಮಾಡಿದರು. ಸಮಾಜ ಉಳಿಯಬೇಕಾದರೇ ವಕೀಲರ ಪಾತ್ರ ಬಹಳ ಮುಖ್ಯವಾಗಿದೆ. ನ್ಯಾಯಾಧೀಶರಿಗೆ ಸತ್ಯತೆಯನ್ನು ಮನವರಿಕೆ ಮಾಡುವ ಮೂಲಕ ಸಾರ್ವಜನಿಕರಿಗೆ ನ್ಯಾಯ ಒದಗಿಸಬಹುದು. ಕಾನೂನು ಎಂಬುದು ಪ್ರತಿ ಹಂತದಲ್ಲೂ ಅನ್ವಯಿಸುತ್ತದೆ. ಮಹಾತ್ಮಗಾಂಧಿ ಸೇರಿದಂತೆ ಮಹಾನೀಯರೆಲ್ಲಾ ಕಾನೂನು ತಜ್ಞರು. ಸಂವಿಧಾನ ಬರೆದಂತಹ ಡಾ|| ಬಿ.ಆರ್. ಅಂಬೇಡ್ಕರ್ ಕೂಡ ವಕೀಲರಾಗಿದ್ದರು. ಅವರೊಬ್ಬ ಧೀಮಂತ ಪುರುಷ. ಜೊತೆಗೆ ಸಂವಿಧಾನದಲ್ಲಿ ಇದ್ದ ಮೇದಾವಿಗಳೆಲ್ಲಾರೂ ವಕೀಲರು ಆಗಿದ್ದರು. ಇರುವ ವ್ಯವಸ್ಥೆಯಲ್ಲಿ ನಂಬಿಕೆ ಉಳಿಯಬೇಕಾದರೇ ಕಾನೂನು ಅವಶ್ಯಕ ಎಂದರು.

ಗುರುತರವಾದ ಜವಬ್ದಾರಿ ಇವರ ಮೇಲೆ ಇದ್ದು, ಹಣ ಸಂಪಾದನೆ ಮಾಡಿದರೇ ಹೆಸರು ಗಳಿಸಬಹುದು. ಆದರೇ ನಿಮ್ಮಲ್ಲಿ ಇರುವಂತಹ ಆತ್ಮಶಕ್ತಿ, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವ ಇಚ್ಚಾಶಕ್ತಿ ಇದನ್ನು ಮೊದಲು ಕಲಿಯಬೇಕಾಗಿದೆ. ಸಂಪಾದನೆ ಮಾಡುವುದು ಮುಖ್ಯವಲ್ಲ. ಅದನ್ನು ಯಾವ ರೀತಿ ಗಳಿಸುತ್ತೇವೆ ಎಂಬುದು ಪ್ರಮುಖವಾಗಿದೆ. ಪ್ರತಿಯೊಬ್ಬರೂ ಕೆಲಸ ಮಾಡುವುದು ಅವರವರ ಜೀವನ ಸಾಗಿಸುವುದಕ್ಕೆ. ಸಂಪಾದನೆಯನ್ನು ವಾಮ ಮಾರ್ಗದಲ್ಲಿ ಇಲ್ಲವೇ ಸರಿಯಾದ ಮಾರ್ಗದಲ್ಲಿ ಮಾಡುವುದು ನಿರ್ಧರಿಸಿರುತ್ತದೆ. ನೈತಿಕತೆ ಬೆಳೆಸಿಕೊಳ್ಳುವ ಮೂಲಕ ತಮ್ಮತನ ಬಿಡದೆ ಗೌರವದಿಂದ ಸಂಪಾದನೆ ಮಾಡುವುದು ವಕೀಲರ ವೃತ್ತಿ ಆಗಬೇಕು ಎಂದು ಸಲಹೆ ನೀಡಿದರು.

ಸ್ವಾಭಿಮಾನ ಬೆಳೆಸಿಕೊಂಡು ಗುರಿ ತಲುಪಬೇಕು. ಏನೆ ಕೆಲಸ ಮಾಡಿದರೂ ಅದು ಕಾನೂನಿ ಚೌಕಟ್ಟಿನಲ್ಲಿ ಸಾಗಬೇಕು. ಆ ನಿಟ್ಟಿನಲ್ಲಿ ವಕೀಲರು ಕಾರ್ಯ ಪ್ರವೃತ್ತರಾಗಬೇಕು ಎಂದರು. ಈ ಸಂದರ್ಭದಲ್ಲಿ ಪ್ರಾಂಶುಪಾಲ ಎಂ.ಕೆ. ಮಾಟೋಳ್ಳಿ, 2ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ವಿಜಯಕುಮಾರ್ ಇತರರು ಇದ್ದರು.

ಸೆ.6ರಿಂದ ಕಬಡ್ಡಿ ಪಂದ್ಯಾವಳಿ



ಹಾಸನ:ಸೆ,5– ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ಮೈಸೂರು ವಲಯ ಮತ್ತು ಅಂತರ್ ವಲಯಗಳ ಹೊನಲು ಬೆಳಕಿನ ಕಬ್ಬಡಿ ಪಂದ್ಯಾವಳಿಯನ್ನು ಸೆ.6ರಿಂದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಡಾ. ಎಸ್.ವಿ. ಸಂತೋಷ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2017 ಸೆಪ್ಟಂಬರ್ 6 ರಿಂದ 9 ರವರೆಗೆ ಅಂತರ ವಲಯ ಕಬ್ಬಡಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಉದ್ಘಾಟನೆಯನ್ನು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿಮ್ಸ್ ನಿರ್ದೇಶಕ ಬಿ.ಸಿ. ರವಿಕುಮಾರ್ ವಹಿಸಿದ್ದಾರೆ. ಮುಖ್ಯ ಅತಿಥಿಯಾಗಿ ಉಪ ಕುಲಸಚಿವ ವಸಂತ ಬಿ. ಶೆಟ್ಟಿ, ವಾರ್ತಾಧಿಕಾರಿ ವಿನೋದ್ ಚಂದ್ರ,ಕಬ್ಬಡಿ ಕ್ರೀಡಾಪಟುಗಳು, ರೈಲ್ವೆ ತಂಡದ ಆಟಗಾರರು ಆನಂದ್, ಎಸ್.ಎಂ. ಸುರೇಶ್, ಹಿಮ್ಸ್ ಆಡಳಿತಾಧಿಕಾರಿ ಎನ್.ಎಸ್. ಚಿದಾನಂದ್, ಪ್ರಭಾರಿ ವೈದ್ಯಾಧಿಕಾರಿ ವಿ.ಆರ್. ಕರಷ್ಣಮೂರ್ತಿ ಇತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುವ ಮೈಸೂರು ವಿಭಾಗದ ಪಂದ್ಯಾವಳಿಯು ಮೊದಲ ದಿನ ಸೆ.6 ರಿಂದ 7ರ ವರೆಗೂ ಎರಡು ದಿನಗಳ ಕಾಲ ನಡೆಯಲಿದೆ. ಇದರಲ್ಲಿ 9 ಜಿಲ್ಲೆಯ ಕಾಲೇಜುಗಳಿಂದ ಒಟ್ಟು 14 ತಂಡಗಳು ಈಗಾಗಲೇ ನೊಂದಾವಣಿ ಮಾಡಿಕೊಂಡಿದೆ. ಅಂತರ್ ವಲಯಗಳಾದ ಮೈಸೂರು, ಬೆಂಗಲೂರು, ಕಲಬುರ್ಗಿ ಹಾಗೂ ಬೆಳಗಾವಿ ವಲಯಗಳ ಪಂದ್ಯಾವಳಿಯು ಸೆ.8 ರಂದು ನಡೆಯಲಿದೆ. ಅಂತಿಮವಾಗಿ 9ರ ಶನಿವಾರ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕಬ್ಬಡಿ ತಂಡವನ್ನು ಇಲ್ಲಿ ಆಯ್ಕೆ ಮಾಡುವುದಾಗಿ ಹೇಳಿದರು.

ರೈತ ಸಾವು

ಚನ್ನರಾಪಟ್ಟಣ:ತಾಲೂಕಿನ ಕಸಬಾ ಹೋಬಳಿಯ ದೇವಿಗೆರೆ ಗ್ರಾಮದ ರೈತ ಡಿ.ಎನ್.ತಿಮ್ಮೇಗೌಡ(60) ಸಾಲದ ಸಮಸ್ಯೆಯಿಂದ ತಮ್ಮ ಜಮೀನಿನಲ್ಲಿಯೇ ಮಂಗಳವಾರ ನೇಣಿಗೆ ಶರಣಾಗಿದ್ದಾನೆ.

ತಾಲೂಕಿನ ನಂಜೇಗೌಡರ ಮಗ ಡಿ.ಎನ್.ತಿಮ್ಮೇಗೌಡ
ರೈತನಾಗಿದ್ದು ಇ [redacted]
ಜಮೀನಿನಲ್ಲಿ
ಕೊಳವೆಬಾವಿ
ಬತ್ತಿತ್ತು. ಬೆಳೆದ
ಜೋಳ ಹಾಗೂ
ಒಣಗಿದ್ದವು, ಕೆನ
1 ಲಕ್ಷ ಸಾಲ
ಸಹಕಾರಿ ಸಂಘ
ಸಾವಿರ ಸಾಲ ಹ
ಇಂಡಿಯನ್
ಬ್ಯಾಂಕಿನಲ್ಲಿ ಚಿನ್ನ
ಲಕ್ಷ ಸಾಲ ಮಾ
ನುಗ್ಗೇಹಳ್ಳಿ
ದೂರು ದಾಖಲಾ
ಸರ್ಕಾರಿ ಆಸ್ಪತ್ರೆಯ
ನಡಿಸಲಾಗಿದೆ.
ದೇವಿಗೆರೆ ಗ್ರಾವ
ಅಂತ್ಯಕ್ರಿಯೆ ಜರು

ಶಿಕ್ಷಕರಿಗೆ ಸ್ವಾವಲಂಬನೆ,ಸ್ವಾಭಿಮಾನ ಆತ್ಮಾವಲೋಕನ ಮುಖ್ಯ

ಹಾಸನ:ಸೆ,5–ಗುರುವಾದವರು ನಿರಂತರವಾಗಿ ಓದುತ್ತಲೇ ಇರಬೇಕು, ಓದಿದ್ದು ಅರ್ಥೈಸಿಕೊಂಡು ಅದನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ನುಡಿ ಮತ್ತು ನಡೆ ಒಂದೇ ಆಗಿರುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ
[redacted] ಜು ತಿಳಿಸಿದರು.
ಲ್ಲಾ ಆಡಳಿತ, ಜಿಲ್ಲಾ ಪಂಚಾ
ಮತ್ತು ಸಾರ್ವಜನಿಕ ಶಿಕ್ಷಣ
ಇವರ ಸಂಯುಕ್ತಾಶ್ರಯದಲ್ಲಿ
ಶ್ರೀ ಆದಿಚುಂಚನಗಿರಿ ಸಮು
ಭವನದಲ್ಲಿ ಏರ್ಪಡಿಸಲಾಗಿದ
ರ್ವಪಲ್ಲಿ ರಾಧಾಕೃಷ್ಣನ್‌ರವರ
ನಾಚರಣೆ ಹಾಗೂ ಶಿಕ್ಷಕರ
ರಣೆಯನ್ನು ಉದ್ಘಾಟಿಸಿ
ಡಿದ ಅವರು, ದೇಶ ಪ್ರೇಮ,
ಯನ್ನು ಮಕ್ಕಳಲ್ಲಿ ತುಂಬುವ
ರಲ್ಲಿದೆ. ಸಮಾಜದಲ್ಲಿ ಶಿಕ್ಷಣ
ಶಿಕ್ಷಕರ ಮಹತ್ವದಾಗಿದೆ
ಅಭಿಪ್ರಾಯಪಟ್ಟರು.
ರಾರಂಭದ ದಿವ್ಯ ಸಾನಿಧ್ಯ
ಮಾತನಾಡಿದ ತುಮಕೂರಿನ
ಮಕೃಷ್ಣ ವಿವೇಕಾನಂದ
ಅಧ್ಯಕ್ಷ ಶ್ರೀ ವೀರೇಶಾನಂದ

' ಈ ಪ್ರಪಂಚದ ಎಲ್ಲಾ ಅಂಕುಡೊಂಕುಗಳನ್ನ ಸಮರ್ಪಕವಾಗಿ ತಿದ್ದಿ ಮಾನವನ ಬುದುಕಿಗೆ ಉತ್ತಮ ದಿಕ್ಸೂಚಿಯಾಗಿ ಸೂಚಿಸಿದ ಗುರು ಪರಂಪರೆ ಎಂದು ಸ್ಮರಿಸಿದರು.ಶಿಕ್ಷಕರ ಸಮ್ಮೇಳನ ಇದೊಂದು ಆತ್ಮ ವಲೋಕನ ಸಭೆ ಎಂದು ತಿಳಿಯಬೇಕು, ' ಶಿಕ್ಷಕನೇ ನಿಜವಾದ ರಾಷ್ಟ್ರ ರಕ್ಷಕ' ಆದರೆ ಈಗಿನ ' ಸಮಾಜವು ಶಿಕ್ಷಕರಲ್ಲಿ ಭರವಸೆಯನ್ನು ಕಳೆದುಕೊಳ್ಳುವುದಕ್ಕೆ ಮೊದಲೇ ಶಿಕ್ಷಕರೇ ತಮ್ಮ ವೃತ್ತಿಯಲ್ಲಿ ಭರವಸೆ ಕಳೆದುಕೊಳ್ಳತ್ತಿದ್ದಾರೆ ಎಂಬ ಅತಂಕ ಈಗಿನ ಸಮಾಜದಲ್ಲಿ ಇದೆ ಎಂದು ಸ್ವಾಮೀಜಿ ಹೇಳಿದರು.

ಶಿಕ್ಷಕರು ಇತರೆ ಇಲಾಖೆ ಅಧಿಕಾರಿಗಳ ಹಾಗೂ ನೌಕರೆಂದು ಆತ್ಮಾವಲೋಕನ ಮಾಡಿಕೊಳ್ಳದೆ ಸಮಾಜದಲ್ಲಿ ನಮಗೊಂದು ವಿಶೇಷ ಗೌರವ ಇದೆ ಎಂದು ತಿಳಿದುಕೊಂಡು ವಿದ್ಯಾರ್ಥಿಗಳಿಗೆ ಆರೋಗ್ಯಕರವಾದ ಪಾಠ ಪ್ರವಚನ ಮಾಡುವುದು ಒಳ್ಳೆಯದು. ಆಗ ಮಾತ್ರ ಶಿಕ್ಷಕ ವೃತ್ತಿಗೆ ಗೌರವ ಬರುತ್ತದೆ ಎಂದು ತಿಳಿಸಿದರು.ಶಿಕ್ಷಕರಾದವರಿಗೆ ಸ್ವಾವಲಂಬನೆ, ಸ್ವಾಭಿಮಾನ ಹಾಗೂ ಆತ್ಮಾವಲೋಕನ ಮಾಡಿಕೊಳ್ಳುವ ಗುಣಗಳು ಇರಬೇಕು ಸ್ವಾಭಿಮಾನವನ್ನು ಸಮಾಜದಲ್ಲಿ ಕಾಳ್ಗಿಚ್ಚಿನಂತೆ ಪಸರಿಸಿರುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು ಎಂದು ಶಿಕ್ಷಕರಿಗೆ ಸಲಹೆ ನೀಡಿದರು.

ಸಮಾಜವು ಶಿಕ್ಷಕರಲ್ಲಿನ ಭರವಸೆಯನ್ನು ಕಳೆದುಕೊಳ್ಳುವುದಕ್ಕಿಂತ ಮೊದಲೇ ಶಿಕ್ಷಕರೇ ತಮ್ಮ ವೃತ್ತಿಯ ಭರವಸೆ ಕಳೆದುಕೊಳ್ಳುತ್ತಾರಾ ಎಂಬ ಆತಂಕ ಪ್ರಸ್ತುತ ದಿನಗಳಲ್ಲಿ ಎದುರಾಗುತ್ತಿದೆ ಎಂದು ಹೇಳಿದರು. ಜಿಲ್ಲಾ ಪಂಚಾಯತಿ ಅಧ್ಯಕ್ಷ ಬಿ.ಎಸ್. ಶ್ವೇತಾ ದೇವರಾಜ್ ಅವರು ಮಾತನಾಡಿ, ಶಿಕ್ಷಕರ ಸ್ಥಾನ ಗೌರವ ತರುವ ಸ್ಥಾನವಾಗಿದ್ದು ಸರ್ವೋತೋಮುಖ ಬೆಳವಣಿಗೆಗೆ ಉತ್ತಮ ಗುರುಗಳು ಅವಶ್ಯಕ ಮತ್ತು ಪ್ರತಿ ಮಗುವಿನ ಬೆಳವಣಿಗೆ ಶಿಕ್ಷಕರ ಪಾತ್ರ ಪ್ರಮುಖ ಎಂದರು. ಕಾರ್ಯಕ್ರಮದಲ್ಲಿ ಸ್ವಚ್ಚ ಭಾರತ ಅಭಿಯಾನದಡಿ ' ರಾಷ್ಟ್ರಮಟ್ಟದ ಸ್ವಚ್ಚ ನಿಧಿಯ ಪುರಸ್ಕಾರವನ್ನು ಸಕಲೇಶಪುರದ ಆಗ್ರಹಾರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೀಡಿ ಗೌರವಿಸಲಾಯಿತು ಮತ್ತು ಎಲ್ಲಾ ಅತ್ಯುತ್ತಮ ಶಿಕ್ಷಕರುಗಳನ್ನು ಸನ್ಮಾನಿಸಲಾಯಿತು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಾಗೂರು ಮಂಜೇಗೌಡ ಅವರು ಮಾತನಾಡಿ, 6ನೇ ವೇತನ ಆಯೋಗದ ಶಿಫಾರಸ್ಸುಗಳು ಬೇಗ ಜಾರಿಯಾಗಬೇಕು. ಈ ಬಗ್ಗೆ ಮುಖ್ಯಮಂತ್ರಿಯವರಲ್ಲಿ ಮನವಿ ಸಲ್ಲಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಜಾನಕಿ, ಜಿಪಂ ಉಪಾಧ್ಯಕ್ಷ ಶ್ರೀನಿವಾಸ್, ನಗರಸಭಾ ಅಧ್ಯಕ್ಷ ಡಾ|| ಹೆಚ್.ಎಸ್. ಅನಿಲ್ ಕುಮಾರ್, ಹುಡಾ ಅಧ್ಯಕ್ಷ ಕೃಷ್ಣ ಕುಮಾರ್, ತಾಪಂ ಅಧ್ಯಕ್ಷ ಸತೀಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ , ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜು ನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಬಲರಾಂ, ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಲೋಕೇಶ್, ಸಹಶಿಕ್ಷಕರ ಸಂಘದ ಅಧ್ಯಕ್ಷ ಸೋಮಶೇಖರ್, ಶಿಕ್ಷಕರ ಸಂಘದ ಅಧ್ಯಕ್ಷ ಅಣ್ಣಪ್ಪ ಇನ್ನಿತರರು ಇದ್ದರು.

ಗೌರಿಲಂಕೇಶ್ ಹತ್ಯೆ: ಖಂಡನೀಯ



ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ದುಷ್ಕರ್ಮಿಗಳು ಗುಂಡು ಹಾರಿಸಿ ಹತ್ಯೆ ಮಾಡಿರುವುದನ್ನು ಕರ್ನಾಟಕ ಪತ್ರಕರ್ತೆಯರ ಸಂಘ ಖಂಡಿಸಿದೆ. ವಿಚಾರವಾದಿಗಳನ್ನು ಕೊಲ್ಲಬಹುದು. ಆದರೆ ವಿಚಾರಗಳನ್ನು ಕೊಲ್ಲಲು ಸಾಧ್ಯವಿಲ್ಲ. ಹೆದರಿಸಿ ಬಾಯಿ ಮುಚ್ಚಿಸುವ ಕೃತ್ಯ ಇದ್ದಾಗಿದೆ ಎಂದು ಸಂಘ ಅಭಿಪ್ರಾಯಪಟ್ಟಿದೆ. ಸಂಘದ ಸದಸ್ಯರಾದ ಆರ್.ಪೂರ್ಣಿಮ, ಜ್ಯೋತಿ ಇರವತ್ತೂರು, ಲೀಲಾವತಿ, ಹೇಮಾವೆಂಕಟ್, ನಿರ್ಮಲ್ಎಲಿಗಾರ್,ರೂಪಶ್ರೀ, ರಾಧಹಿರೇಗೌಡ , ಮಂಜುಶ್ರೀ, ಉಮಾಅನಂತ್,ಜಯಂತಿ, ಪದ್ಮಶಿವರಾಂ ಶೈಲಜಹಾಸನ್, ಶೃತಿ,ಇನ್ನಿತರರು ವಿಷಾದಿಸಿದ್ದಾರೆ.

ಹಿರಿ[redacted]ಸಲ್ಲಿಸುವ ವಂದನಾರ್ಪಣೆಯೇ ಪಿತೃಪಕ್ಷ

ಪಿತೃಗಳಿಗೆ ನ [redacted]
ವಂದನಾರ್ಪಣೆಯ
ವಿಶೇಷ. ನಾವು
ಮಾಡಲಿ; ನಮ್ಮ
ಜೀವನಕ್ಕೆ ನಮ್ಮ
ಅಪಾರ. ವರ್ಷಕೆ
ರನ್ನೂ ನೆನೆದು ನಮ
ವುದು ನಮ್ಮ ಕರ್ತ
ಗಕ್ಕೆ ಯಾವುದೇ
ಭೇದವಿಲ್ಲ! ಪಿತೃಪಕ್
ಅನ್ವಯಿಸುವ ಆಚ
ಆಚರಣೆ ಎ
ಮನೆಯಲ್ಲಿ ತಿಲ
ವುದನ್ನು ಶಾಸ್ತ್ರಗ
ಭಾನುವಾರ, ಶು
ಕೃತಿಕಾ ಹಾಗೂ
ರುವ ದಿನಗಳಲ್ಲಿ ಕ
ಷೇಧಿಸ ಲಾಗಿದೆ. ಆದರೆ
ದಲ್ಲಿ ಮಾತ್ರ ಯಾವುದೇ
ತಿಥಿ ವಾರ ನಕ್ಷತ್ರಗಳಿದ್ದರೂ
ಣ ಮಾಡಬಹುದು.
ರ್ಪಣಕ್ಕೆ ಉತ್ತಮ
ದರೆ ಪವಿತ್ರ ನದೀ ತೀರಗಳು
ಗೋಕರ್ಣಾದಿ ತೀರ್ಥ

ಕ್ಷೇತ್ರಗಳು. ಪಿತೃಪಕ್ಷದಲ್ಲಿ ಅವಶ್ಯವಾಗಿ ತರ್ಪಣದ ಅಧಿ ಕಾರವುಳ್ಳವರು ಗೋಕರ್ಣ, ಶ್ರೀರಂಗಪಟ್ಟಣ ಮುಂತಾದ ಕ್ಷೇತ್ರಗಳು ಅಥವಾ ಕಾವೇರಿ, ಗಂಗಾ ಇಂಥ ಪವಿತ್ರ ನದೀತೀರ ಗಳಲ್ಲಿ ಪಿತೃಗಳಿಗೆ ಪಿಂಡಪ್ರದಾನ, ತರ್ಪಣಾದಿಗಳನ್ನು ಅರ್ಪಿಸು ವುದು ಉತ್ತಮ. ವಿವಾಹವಾಗಿ ಇನ್ನೂ ಒಂದು ವರ್ಷ ಮುಗಿಯದವರು ತರ್ಪಣ ಮಾಡಕೂಡದು.ಪರಮ ದುರ್ಲಭವಾದ ಮನುಷ್ಯಜನ್ಮದ ಸಾಫಲ್ಯತೆಯು ಅದನ್ನು ಪಡೆದ ನಮ್ಮ ಆಚರಣೆ ಗಳ ಮೇಲೆ ಅವಲಂಬಿತ ವಾಗಿರುತ್ತದೆ. ಪರಮಾತ್ಮ ನಮಗೆ ಈ ಜನ್ಮವನ್ನು ಏತಕ್ಕಾಗಿ ನೀಡಿದ್ದಾನೆ ಎಂದರೆ ಹಿಂದಿನ ಜನ್ಮದ ಪಾಪ ಶೇಷಗಳನ್ನು ಅನುಭವಿಸಿ ಮುಗಿಸಿ ಮತ್ತೆ ಇನ್ನೂ ಹೆಚ್ಚಿನದಾದ ಪುಣ್ಯಸಂಪಾದನೆ ಮಾಡಿ ಮೋಕ್ಷವನ್ನು ಪಡೆಯಲಿ ಎಂದು. ಆಚಾರ್ಯ ಶಂಕರರು ನುಡಿದಂತೆ ಪುನರಪಿ ಜನನಂ ಪುನರಪಿ ಮರಣಂ. ಹೀಗೆ ಎಷ್ಟು ಜನ್ಮ ತಾಳಿದರೂ ಸಹ ಮುಗಿಸಲಾ ಗದಷ್ಟು ಪಾಪವನ್ನು ಒಂದೇ ಜನ್ಮದಲ್ಲಿ ಸಂಪಾದಿಸಿ ಬಿಡುತ್ತೇವೆ. ಈ ಕಠಿಣ ಸಮಸ್ಯೆಗೆ ನಮ್ಮ ಶಾಸ್ತ್ರಗಳು ಸುಲಭ ಪರಿಹಾರ ನೀಡುತ್ತವೆ. ಶಾಸ್ತ್ರಗಳ ಪ್ರಕಾರ ಮೃತರ ಆತ್ಮಗಳಿಗೆ ಶಾಶ್ವತ ಪಿತೃ ಲೋಕ ಪ್ರಾಪ್ತಿಯಾಗುವಂತೆ ಮಾಡುವುದು ಅವರ ಮಕ್ಕಳ ಕರ್ತವ್ಯ.

ಗರುಡಪುರಾಣದಲ್ಲಿ ಭಗವಂತನು ನುಡಿಯುತ್ತಾನೆ: ಯಾವನು ಪುತ್ ಎಂಬ ನರಕ ದಿಂದ ಪಿತೃಗಳನ್ನು ಪಾರು ಮಾಡುತ್ತಾನೋ ಅವನೇ ಪುತ್ರ'. ಆದುದರಿಂದ ಯಾವುದೇ ಜಾತಿ ಬೇಧವಿಲ್ಲದೆ ಕರ್ಮಾಕಾರ ಇದ್ದಲ್ಲಿ ಪಿತೃಗಳಿಗೆ ಶ್ರಾದ್ಧ, ತರ್ಪಣ ಹಾಗೂ ದಾನಗಳನ್ನು ಮಾಡಿ ತಮ್ಮ ಋಣ ತೀರಿಸಲೇಬೇಕು.

(4ನೇ ಪುಟಕ್ಕೆ)

SG GROUPS OF COMPANY

Company Name :- SG GROUOS
Company Details :-
We are developing all kind of software projects like
Software developing
Website developing
Blog developing
Apps developing
E paper developing
Address:- Bhumika 1 main,
2 cross, shanthi nagar
Hassan-573201
Phone Number:-
9738222641, 797571813 ..
E-Mail ID :- sgroups125@gmail.com

SG Groups